## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 246/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಏಜಾಜ್ ಅಹಮದ್ | ಪಿಡಬ್ಲ್ಯೂ : 1 |
| ತಂದೆಯ / ಗಂಡನ ಹೆಸರು | : ಜುಲ್ಕರ್ ನೈನ್ | ಸಿಡಬ್ಲ್ಯೂ : 3 |
| ವಯಸ್ಸು | : 46 ವರ್ಷ | |
| ಉದ್ಯೋಗ | : ವ್ಯಾಪಾರ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 25.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಕಿಯಾ ಮ್ಯಾನ್ ಪವರ್ ಸರ್ವೀಸ್ ಎಂಬ ಹೆಸರಿನಡಿಯಲ್ಲಿ ನಾನು ಒಂದು ಸಂಸ್ಥೆಯನ್ನು ಕಳೆದ 2 ವರ್ಷಗಳಿಂದ ನಡೆಸುತ್ತಿದ್ದೇನೆ. 2022 ರಲ್ಲಿ ಈ ಸಂಸ್ಥೆಯಲ್ಲಿ ಸುಮಾರು 8 ರಿಂದ 10 ಜನ ಕೆಲಸಗಾರರು ಇದ್ದರು. ರೈಲ್ವೆ ಗೂಡ್ಸ್ ಶೆಡ್ಡಿಗೆ ನಾನು 3 ಜನರನ್ನು ವಾಚ್ ಮೆನ್ ಗಳನ್ನಾಗಿ ಕೊಟ್ಟಿದ್ದೆ. ಅವರು ಹಗಲಿನಲ್ಲಿ ಒಬ್ಬರು ಮತ್ತು ರಾತ್ರಿ ಕರ್ತವ್ಯಕ್ಕೆ ಇಬ್ಬರು ಎಂದು ಕೆಲಸ ಮಾಡುತ್ತಿದ್ದರು. ಚಾ,ಸಾ. 2 ನಮ್ಮಲ್ಲಿ ವಾಚ್ ಮನ್ ಆಗಿ ಕೆಲಸ ಮಾಡುತ್ತಿದ್ದರು. ಆತನನ್ನು ನಾನು ರೈಲ್ವೆ ಗೂಡ್ಸ್ ಶೆಡ್ಡಿಗೆ ಡೆಪ್ಯೂಟ್ ಮಾಡಿದ್ದೆ. ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ. ಈ ಪ್ರಕರಣದ ದೂರುದಾರರಾದ ಸುರೇಶ್ ರವರ ಬಗ್ಗೆ ನನಗೆ ಗೊತ್ತಿಲ್ಲ.

2. ಈಗ್ಗೆ 2 ವರ್ಷಗಳ ಹಿಂದೆ ನಾನು ಮನೆಯಲ್ಲಿದ್ದೆ. ರಾತ್ರಿ 10.30 ರಿಂದ 11.00 ಗಂಟೆಯ ಸಮಯಕ್ಕೆ ಚಾ,ಸಾ. 2 ನನಗೆ ಪೋನ್ ಮಾಡಿ ಯಾರೋ ಬಂದು ರೈಲ್ವೆ ಗೂಡ್ಸ್ ಶೆಡ್ಡಿನ ಮುಂದೆ ಬಿದಿದ್ದಾರೆ ಎಂದು ತಿಳಿಸಿದರು. ಆಗ ನಾನು ಪೋಲೀಸರಿಗೆ ಪೋನ್ ಮಾಡಿದೆ. ನಾನು 121 ನಂಬರ್ ಗೆ ಪೋನ್ ಮಾಡಿದ್ದೆ. ನಾನು 11.30 ರ ಸಮಯಕ್ಕೆ ಆ ಸ್ಥಳಕ್ಕೆ ಹೋದೆ. ಅಲ್ಲಿ ಚಾ,ಸಾ. 2 ಇದ್ದ. ಹಾಗೆಯೇ ಅಲ್ಲಿ ಹೊಡೆದು ಹಾಕಿದ್ದ ಒಬ್ಬ ವ್ಯಕ್ತಿ ಸಹ ಬಿದ್ದಿದ್ದ. ಚಾ,ಸಾ. 2 ನನ್ನಲ್ಲಿ ಅಲ್ಲಿ ಯಾರೋ ಬಿದಿದಿದ್ದಾರೆ , ಆತನನ್ನು ಹೊಡೆದು ಹಾಕಿದ್ದಾರೆ , ನಾನಿನ್ನೂ ನೋಡಿರುವುದಿಲ್ಲ ಎಂದು ಹೇಳಿದ. ನಾನು ಹೋಗಿ ಆತನನ್ನು ಟಾರ್ಚ ಹಾಕಿ ನೋಡಿದೆ. ಆತನಿಗೆ ಬಲ ಕೆನ್ನೆಗೆ , ಕಾಲಿನ ಪಾದದ ಮೇಲೆ ಗಾಯವಾಗಿತ್ತು. 5 ಗರುಡಾ ಜೀಪುಗಳು ರಾತ್ರಿ 12.00 ರಿಂದ 12.15 ರ ಸಮಯಕ್ಕೆ ಆ ಸ್ಥಳಕ್ಕೆ ಬಂದವು. ಅವರು ಆತನನ್ನು ನೋಡಿದರು. ಆತ ಇನ್ನೂ ಹುಸಿರಾಡುತ್ತಿದ್ದ. ಪೋಲೀಸರು ಆತನಿಗೆ ನೀರನ್ನು ಕಡಿಸಲು ಹೋದರು. ಆಗ ನಾನು ಹೊಂದಿದ್ದ ಅನುಭವದ ಆದಾರದ ಮೇರೆಗೆ ನೀರು ಕುಡಿಸಬೇಡಿ ಎಂದು ಹೇಳಿದೆ. ಒಬ್ಬ ಪೋಲೀಸ್ ಹೋಗಿ ಆ್ಯಂಬುಲೆನ್ಸ್ ಕರೆದುಕೊಂಡು ಬಂದರು. ಅದರಲ್ಲಿ ಆ ವ್ಯಕ್ತಿಯನ್ನು ಹಾಕಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆತನನ್ನು ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನನಗೆ ಮರು ದಿನ ತಿಳಿದು ಬಂತು.

3. ಅಲ್ಲಿ ಬಿದಿದ್ದ ವ್ಯಕ್ತಿ ಯಾರು, ಎಲ್ಲಿಯವನು, ಯಾವ ಕೆಲಸ ಮಾಡುತ್ತಿದ್ದ, ಎನ್ನುವ ಬಗ್ಗೆ ನನಗೆ ಗೊತ್ತಾಗಲಿಲ್ಲ. ಆತನ ಮೇಲೆ ಆ ರೀತಿಯಲ್ಲಿ ಗಾಯ ಮಾಡಿದವರು ಯಾರು ಎನ್ನುವುದು ಸಹ ಸ್ಥಳದಲ್ಲಿ ಗೊತ್ತಾಗಲಿಲ್ಲ. ಎರಡು ದಿನಗಳ ನಂತರ ಪೋಲೀಸರು ನನ್ನನ್ನು ಪೋಲೀಸ್ ಠಾಣೆಗೆ ಕರೆಸಿದ್ದರು. ಆ ವ್ಯಕ್ತಿಯ ಪೋಟೋವನ್ನು ತೋರಿಸಿ, ಈಗ ಆತ

ಹುಷಾರಾಗಿದ್ದಾನೆ ಎಂದು ತಿಳಿಸಿದರು. ಅಲ್ಲಿ ಒಂದು ದಾಖಲಾತಿಗೆ ನನ್ನ ಸಹಿಯನ್ನು ಪಡೆದರು. ಪೋಲೀಸರು ಅಲ್ಲಿ ನನಗೆ ಬೇರೆ ಯಾರನ್ನು ತೋರಿಸಲಿಲ್ಲ. ನನ್ನ ಹೇಳಿಕೆಯನ್ನು ಪೋಲೀಸರು ದಾಖಲಿಸಿಕೊಂಡರು. ಆ ಪೋಲೀಸ್ ಠಾಣೆಯಲ್ಲಿ ನಾನು ನ್ಯಾಯಾಲಯಂದ ಮಂದಿರುವ ಆರೋಪಿತರಲ್ಲಿ ಯಾರನ್ನೂ ನೋಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ

4. ದಿಃ 13.12.2022 ರಂದು ನಾನು ರೈಲ್ವೆ ಗೂಡ್ಸ್ ಶೆಡ್ಡಿಗೆ ರಾತ್ರಿ ಪಾಳೆಗೆ ಇಬ್ಬರನ್ನು ನೇಮಕ ಮಾಡಿದ್ದೆ. ಅದರಲ್ಲಿ ಒಬ್ಬ ಗೈರು ಹಾಜರಾಗಿದ್ದ ಎನ್ನುವುದು ಸರಿ. ನಾಗೇಂದ್ರ ಮಾತ್ರ ಕರ್ತವ್ಯಕ್ಕೆ ಬಂದಿದ್ದ ಎನ್ನುವುದು ಸರಿ. ಆ ನಾಗೇಂದ್ರನನ್ನು ನಾನು ನೋಡಲು ಆ ದಿನ ರಾತ್ರಿ 09.30 ಗಂಟೆಗೆ ಗುಂನಂ ಷಾ ವಲಿ ದರ್ಗಾದ ಬಳಿ ಇರುವ ಲಾರಿ ಸ್ಟಾಂಡ್ ಗೆ ಹೋಗಿದ್ದೆ ಎನ್ನುವುದು ಸರಿಯಲ್ಲ. ಆಗ ಒಬ್ಬ ಆಸಾಮಿ ಅಲ್ಲಿ ಕಾಪಾಡಿ , ಕಾಪಾಡಿ ಎಂದು ಕೂಗುವ ಶಬ್ದ ಕೇಳಿಸಿತು ಎನ್ನುವುದು ಸರಿಯಲ್ಲ. ಆಗ ನಾನು ಆ ಕಡೆಗೆ ಟಾರ್ಚ ಹಾಕಿಕೂಂಡು ಹೋದೆ ಎನ್ನುವುದು ಸರಿಯಲ್ಲ. ಆಗ ಮೂವರು ವ್ಯಕ್ತಿಗಳು ಆಟೋ ರಿಕ್ಷಾದಲ್ಲಿ ಹೊರಟು ಹೋಗಿದ್ದು, ಒಬ್ಬ ಆಸಾಮಿ ಓಡಿ ಬಂದು ನಾನು ಮತ್ತು ನಾಗೇಂದ್ರ ನಿಂತಿದ್ದ ಸ್ಥಳಕ್ಕೆ ಬಂದು ಬಿದ್ದ ಎನ್ನುವುದು ಸರಿಯಲ್ಲ. ಆಗ ನೀವು ಗಾಬರಿಗೊಂಡು, ನೀವು ಟಾರ್ಚ ಬಿಟ್ಟು ನೋಡಲಾಗಿ ಆ ವ್ಯಕ್ತಿಯ ಮುಖ, ಕಾಲುಗಳಿಗೆ ರಕ್ತ ಬರುತ್ತಿತ್ತು ಎಂದು ಮಾಡಿದ ಸಲಹೆಗೆ ಸಾಕ್ಷಿ ಆಗ ಸಮಯ ರಾತ್ರಿ 11.30 ಕ್ಕೂ ಹೆಚ್ಚು

ಆಗಿತ್ತು ಎನ್ನುತ್ತಾರೆ. ಆಗ ಆ ಸ್ಥಳಕ್ಕೆ ಮಂಡಿ ಪೋಲೀಸರು ಬಂದು ಸ್ಥಳ ಪರಿಶೀಲಿಸಿದರು ಎನ್ನುವುದು ಸರಿ . ಅವರು ಆ ವ್ಯಕ್ತಿಯನ್ನು ವಿಚಾರಿಸಲಾಗಿ ಆತ ತನ್ನ ಹೆಸರು ಸುರೇಶ ಬಿನ್ ಕೃಷ್ಣ ಮೂರ್ತಿ, ಪೈಂಟ್ ಕೆಲಸ , ಮೋಚಿ ಕಾಲೋನಿ, ಪೆನ್ಷನ್ ಮೊಹಲ್ಲಾ , ಹಾಸನ ಎಂದು ತಿಳಿಸಿದ ಎನ್ನುವುದು ಸರಿಯಲ್ಲ. ಆತ ತನ್ನ ಮೊಬೈಲ್ ನಂಬರ್ ನ್ನು ಸಹ ತಿಳಿಸಿದ ಎನ್ನುವುದು ಸರಿಯಲ್ಲ. ಆಗ ಆತ ತಾನು ಮೈಸೂರಿನ ದೇವರಾಜಮೊಹಲ್ಲಾದ ಪುಟ್ ಪಾತ್ ನಲ್ಲಿ ವಾಸ ಮಾಡುತ್ತೇನೆ ಎಂದು ತಿಳಿಸಿದ ಎನ್ನುವುದು ಸರಿಯಲ್ಲ. ಅದೇ ರೀತಿ ಪುಟ್ ಪಾತ್ ನಲ್ಲಿ ವಾಸವಿರುವ ಮತ್ತು ಚಿಂದಿ ಆಯುವ ಆತನಿಗೆ ಪರಿಚಯವಿರುವ ಗೋರು, ಗೋಪಿ , ಮಂಜ ಮತ್ತು ಇತರೇ ಇಬ್ಬರು ತನ್ನನ್ನು ಆಟೋ ರಿಕ್ಷಾದಲ್ಲಿ ಕರೆದುಕೊಂಡು ಬಂದು ಕೊಲೆ ಮಾಡುವ ಉದ್ದೇಶದಿಂದ ತನಗೆ ಚಾಕುವಿನಿಂದ, ಬ್ಲೇಡ್ ನಿಂದ , ಮಚ್ಚಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿದ ಎನ್ನುವುದು ಸರಿಯಲ್ಲ. ಆಗ ಕಿರುಚಿಕೊಂಡು ಅವರಿಂದ ತಪ್ಪಿಸಿಕೊಂಡು ಓಡಿ ಬಂದಾಗ ಅವರುಗಳು ಆಟೋ ರಿಕ್ಷಾದಲ್ಲಿ ಹೊರಟು ಹೋಗಿರುತ್ತಾರೆ ಎಂದು ತಿಳಿಸಿದ ಎನ್ನುವುದು ಸರಿಯಲ್ಲ.

5. ಮರು ದಿನ ಅಂದರೆ ದಿಃ 14.12.2022 ರಂದು ನನ್ನನ್ನು ಮಂಡಿ ಪೋಲೀಸ್ ಠಾಣೆಗೆ ಕರೆಸಿದ್ದರು ಎನ್ನುವುದು ಸರಿಯಲ್ಲ. ಅಲ್ಲಿ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ನನಗೆ ಠಾಣೆಯಲ್ಲಿ ತೋರಿಸಿದರು ಎನ್ನುವುದು ಸರಿಯಲ್ಲ. ಇದೇ ರೀತಿಯಲ್ಲಿ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

6. ನಾನು ಪೋಲೀಸರ ಮುಂದೆ ಈಗ ಓದಿ ಹೇಳಿದಂತೆ ದಿಃ 14.12.2022 ರಂದು, "ಅದರಂತೆ ನಾನು ಅವರನ್ನು ನೋಡಲು ರಾತ್ರಿ ಸುಮಾರು ............ ಮತ್ತೆ

ನೋಡಿದರೆ ಗುರುತಿಸುತ್ತೇನ್" ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 1 ಎಂದು ಗುರುತುಪಡಿಸಿಕೊಳ್ಳಲಾಯಿತು.

7. ದಿಃ 15.12.2022 ರಂದು ನನ್ನನ್ನು ಪುನಃ ಸದರಿ ಪೋಲೀಸರು ಕರೆಯಿಸಿ 3 ನೇ ಆರೋ ಅಕ್ರಲ್ ಪಾಷ ನನ್ನು ನನಗೆ ಠಾಣೆಯಲ್ಲಿ ತೋರಿಸಿದರು ಎನ್ನುವುದು ಸರಿಯಲ್ಲ. ಆಗ ಪುನಃ ನನ್ನ ಹೇಳಿಕೆಯನ್ನು ಪೋಲೀಸರು ದಾಖಲಿಸಿಕೊಂಡರು ಎನ್ನುವುದು ಸರಿಯಲ್ಲ.

8. ನಾನು ಪೋಲೀಸರ ಮುಂದೆ ಈಗ ಓದಿ ಹೇಳಿದಂತೆ ದಿಃ 15.12.2022 ರಂದು, "ಅದರಂತೆ ನಾನು ಅವರನ್ನು ನೋಡಲು ರಾತ್ರಿ ಸುಮಾರು ............ ಮತ್ತೆ ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 2 ಎಂದು ಗುರುತುಪಡಿಸಿಕೊಳ್ಳಲಾಯಿತು.

9. ಈ ಘಟನೆಗೆ ಸಂಬಂಧಪಟ್ಟಂತೆ ಈ ಮೂವರು ಆರೋಪಿತರು ಆಟೋದಲ್ಲಿ ತಪ್ಪಿಸಿಕೊಂಡು ಓಡಿ ಹೋದದ್ದನ್ನು ನೋಡಿರುತ್ತೇನೆ ಎನ್ನುವುದು ಸರಿಯಲ್ಲ. ನಂತರ ಪೋಲೀಸ್ ಠಾಣೆಯಲ್ಲಿಯೂ ನನಗೆ ಈ ಆರೋಪಿತರನ್ನು ತೋರಿಸಿರುತ್ತಾರೆ ಎನ್ನುವುದು ಸರಿಯಲ್ಲ. ಪೋಲೀಸರ ಮುಂದೆ ನಾನು ನಿಪಿ 1 ಮತ್ತು 2 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಇರುವುದಿಲ್ಲ ಎಂದಿರುತ್ತಾರೆ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**